## ರಾಮನಗರ ಜಿಲ್ಲಾ ಪೊಲೀಸ್

### -: ಪತ್ರಿಕಾ ಪ್ರಕಟಣೆ :-

### ಅಂತರರಾಜ್ಯ ಮಾದಕವಸ್ತು ಸಾಗಾಣಿಕೆ & ಮಾರಾಟಗಾರರ ಬಂಧನ; 60 ಕೆ.ಜಿ ಗಾಂಜಾ & ಕಾರು, ಬೈಕ್ ವಶ

~~~~

ರಾಮನಗರ ಜಿಲ್ಲಾ ಸರಹದ್ದಿನಲ್ಲಿ ಮಾದಕ ವಸ್ತುಗಳ ಸಾಗಾಣಿಕೆ ಹಾಗೂ ಮಾರಾಟ ನಿಯಂತ್ರಣದ ಸಂಬಂಧ ಮಾನ್ಯ ರಾಮನಗರ ಜಿಲ್ಲಾ ಪೊಲೀಸ್ ಅಧೀಕ್ಷಕರವರ ಮಾರ್ಗದರ್ಶನದಲ್ಲಿ, ಮಾಗಡಿ ಉಪವಿಬಾಗದ ಡಿವೈಎಸ್‌ಪಿ ರವರಾದ ಶ್ರೀ ಓಂಪ್ರಕಾಶ್ ರವರ ನೇತೃತ್ವದಲ್ಲಿ ಮಾಗಡಿ ವೃತ್ತದ ಸಿಪಿಐ ರವರಾದ ಶ್ರೀ ಮಂಜುನಾಥ್ ಬಿ.ಎಸ್ ರವರು ತಮ್ಮ ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ತಾವರೆಕೆರೆ ಪೊಲೀಸ್ ಠಾಣಾ ಸರಹದ್ದು ಮಾಗಡಿ-ಬೆಂಗಳೂರು ಮುಖ್ಯರಸ್ತೆಯ ಭಂಟರಕುಪ್ಪೆ ರಸ್ತೆ ಬಳಿ ಮಾದಕ ವಸ್ತುವಾದ ಗಾಂಜಾವನ್ನು ಸಾಗಾಣಿಕೆ ಮತ್ತು ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಸಂಗ್ರಹಿಸಿ ತಮ್ಮ ಅಧಿಕಾರಿ/ಸಿಬ್ಬಂದಿಗಳೊಂದಿಗೆ ದಾಳಿ ಮಾಡಿ ಈ ಕೃತ್ಯದಲ್ಲಿ ಭಾಗಿಯಾದ ಅಂತರರಾಜ್ಯ ಸಾಗಾಣೀಕೆದಾರರೂ ಸೇರಿ ಆರು ಜನ ಆಸಾಮಿಗಳು ಹಾಗೂ 60 ಕೆ.ಜಿ. ಗಾಂಜಾ, ಒಂದು ಇನ್ನೋವಾ ಕಾರು, ಬೈಕು ಮತ್ತು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು ಈ ಬಗ್ಗೆ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಮೊ.ನಂ. 290/2020 ಕಲಂ 20(ಬಿ), 27(ಎ) ಎನ್‌ಡಿಪಿಎಸ್ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಿದ್ದು ಮಾದಕ ವಸ್ತು ಗಾಂಜಾವನ್ನು ಸಾಗಾಣಿಕೆ/ಮಾರಾಟ ಮಾಡುತ್ತಿದ್ದ ಆಸಾಮಿಗಳ ವಿವರ ಈ ಕೆಳಕಂಡಂತಿರುತ್ತದೆ.

1) ಕುಪ್ಪ @ ಕುಪ್ಪುಸ್ವಾಮಿ ಬಿನ್ ಗೋವಿಂದಸ್ವಾಮಿ, ಉಲ್ಲಾಳ ಉಪನಗರ, ಯಶವಂತಪುರ ಹೋ//, ಬೆಂಗಳೂರು ಉತ್ತರ ತಾ.

2) ಪಾಂಗಿಪ್ರಸಾದ್ ಬಿನ್ ಲೇಟ್ ಸೋಮಣ್ಣ, ಕೋಡಿತಲ ಗ್ರಾಮ, ಉಕ್ಕುಂಪೇಟ ಮಂಡಲ, ವಿಶಾಖಪಟ್ಟಣ ಜಿಲ್ಲೆ, ಆಂಧ್ರಪ್ರಧೇಶ ರಾಜ್ಯ.

3) ಶಿವರಾಜ @ ಶಿವು ಬಿನ್ ಸುಂದರ, ನಂ.323, 10ನೇ ಎ ಮೈನ್ ರೋಡ್, ಮಂಜುನಾಥನಗರ, ಬಸವೇಶ್ವರ ನಗರ, ಬೆಂಗಳೂರು.

4) ಶಂಕರ @ ಗಾಂಜ ಶಂಕರ ಬಿನ್ ಲೇಟ್ ಈರಪ್ಪ, ಹೊಸಪಾಳ್ಯ, ಚೋಳನಾಯಕನಹಳ್ಳಿ ದಾಖಲೆ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.

5) ಮಂಜುನಾಥ್ ಎನ್ @ ಮಂಜ ಬಿನ್ ನಾಗರಾಜು, ದೊಡ್ಡಾಲದಮರ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.

6) ನವೀನ್ ಕುಮಾರ್ @ ನವೀನ ಬಿನ್ ಸುರೇಶ್, ಕೇತೋಹಳ್ಳಿ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು.

ಆರೋಪಿಗಳ ವಿಚಾರಣಾ ವೇಳೆಯಲ್ಲಿ ಆರೋಪಿ ಪಾಂಗಿಪ್ರಸಾದನು ಆಂಧ್ರಪ್ರದೇಶದ ಮೂಲದವನಾಗಿದ್ದು ಈತನು ವಿಶಾಖಪಟ್ಟಣ ಜಿಲ್ಲೆಯ ಅರಕು ಕಣಿವೆ ಪ್ರದೇಶದಲ್ಲಿ ಗಾಂಜಾವನ್ನು ಸಂಗ್ರಹಿಸಿ ಅಲ್ಲಿಂದ ಅವುಗಳನ್ನು ಫಿಶ್ ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಿ ತನ್ನ ಕಾರಿನಲ್ಲಿ ಸಾಗಿಸಿ ಆರೋಪಿ ಶಿವರಾಜ, ಕುಪ್ಪುಸ್ವಾಮಿರವರೊಂದಿಗೆ ಸೇರಿಕೊಂಡು ಮಾರಾಟ ಮಾಡುತ್ತಿದ್ದು ಹಾಗೂ ಉಳಿದ ಆರೋಪಿಗಳಾದ ಶಂಕರ, ಮಂಜುನಾಥ ಮತ್ತು ನವೀನಕುಮಾರ್ ರವರು ಪಾಂಗಿಪ್ರಸಾದ್ ರವರಿಂದ ಗಾಂಜಾವನ್ನು ಪಡೆದು ರಾಮನಗರ ಜಿಲ್ಲೆಯ ಸುತ್ತಮುತ್ತಲ ಪ್ರವಾಸಿ ತಾಣಗಳಾದ ಮಂಚನಬೆಲೆ, ಸಾವನದುರ್ಗಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ, ಕಾಲೇಜು ವಿದ್ಯಾರ್ಥಿಗಳು ಹಾಗೂ ಗಾಂಜಾ ವ್ಯಸನಿಗಳಿಗೆ ಪ್ರತಿ 100 ಗ್ರಾಂ.ಗೆ ರೂ. 600/- ನಂತೆ ಮಾರಾಟ ಮಾಡುತ್ತಿದ್ದು ಹಣದ ವ್ಯವಹಾರವನ್ನು ಆನ್‌ಲೈನ್ ಮುಖಾಂತರ ನಡೆಸುತ್ತಿದ್ದರೆಂದು ತಿಳಿಬಂದಿದ್ದು ಮೇಲ್ಕಂಡ ಆರೋಪಿಗಳ ಪೈಕಿ ಕುಪ್ಪುಸ್ವಾಮಿ @ ಕುಪ್ಪ ಎಂಬಾತನು ಈ ಹಿಂದೆ 02 ಕೊಲೆ ಪ್ರಕರಣಗಳಲ್ಲಿ 1ನೇ ಆರೋಪಿಯಾಗಿದ್ದು ನ್ಯಾಯಾಲಯದಿಂದ ಜಾಮೀನು ಪಡೆದು ಈ ಮಾದಕ ದ್ರವ್ಯ ಸಾಗಾಣಿಕೆ ಹಾಗೂ ಮಾರಾಟದಲ್ಲಿ ತೊಡಗಿಸಿಕೊಂಡಿರುವುದಾಗಿ ತಿಳಿದುಬಂದಿರುತ್ತದೆ.

ಮೇಲ್ಕಂಡ ಪ್ರಕರಣವನ್ನು ಪತ್ತೆ ಮಾಡುವ ಬಗ್ಗೆ ರಾಮನಗರ ಜಿಲ್ಲೆಯ ಮಾನ್ಯ ಪೊಲೀಸ್ ಅಧೀಕ್ಷಕರಾದ ಶ್ರೀ ಗಿರೀಶ್ ಹೆಚ್. ಐಪಿಎಸ್ ರವರ ಮಾರ್ಗದರ್ಶನದಲ್ಲಿ, ಮಾಗಡಿ ಉಪವಿಭಾಗದ ಡಿವೈಸ್‌ಪಿರವರಾದ ಶ್ರೀ ಓಂಪ್ರಕಾಶ್ ಕೆ.ಎಸ್.ಪಿ.ಎಸ್ ರವರ ನೇತೃತ್ವದಲ್ಲಿ, ಮಾಗಡಿ ವೃತ್ತ ನಿರೀಕ್ಷಕರಾದ ಶ್ರೀ ಮಂಜುನಾಥ್ ಬಿ.ಎಸ್, ತಾವರೆಕೆರೆ ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀ ನರೇಂದ್ರ ಬಾಬು ಎಂ.ಆರ್, ಮಾಗಡಿ ಪೊಲೀಸ್ ಠಾಣೆಯ ಪಿಎಸ್‌ಐ ವೆಂಕಟೇಶ್ ಟಿ, ಕುದೂರು ಠಾಣೆಯ ಪಿಎಸ್‌ಐ ಶ್ರೀ ಮಂಜುನಾಥ ಟಿ.ಹೆಚ್‌ರವರ ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಗೋವಿಂದರಾಜು, ವೆಂಕಟರಾಮು, ವಿಶ್ವನಾಥ, ಹುಲಿರಾಜ, ತಿಪ್ಪೇಸ್ವಾಮಿ, ಶಿವರಾಜು, ಬೀರಪ್ಪ, ಮಂಜುನಾಥ, ಲಕ್ಷ್ಮೀಕಾಂತ, ಗುರುಮೂರ್ತಿ ಮತ್ತು ಕಂಬೇಗೌಡ ರವರ ತಂಡವು ಪ್ರಕರಣವನ್ನು ಪತ್ತೆ ಮಾಡಿ ಆರೋಪಿ ಮತ್ತು ಮಾಲನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ.
~~~~